ಬೇರೇನೋ ಯೋಚಿಸುತ್ತಿದ್ದೆ.' ಹೊರಗೆ ಕತ್ತಲನ್ನು ದಿಟ್ಟಿಸುತ್ತಾ ಹೇಳಿದರು ಡಾಕ್ಟರ್ ಗಾಂಧೇರ್.

'ಡಾಕ್ಟರ್, ಹ್ಯಾರಿಯ ಹೊದಿಕೆಯನ್ನು ಒಮ್ಮೆಲೇ ಕಿತ್ತೆಳೆದು ಆ ಹಾವು ಅವನನ್ನು ಕಚ್ಚುವ ಮೊದಲೇ ಕೆಳಗೆ ಉದುರಿಸಿದರೆ ಹೇಗೆ?' ನಾನೆಂದೆ.

'ನಾವು ಅನವಶ್ಯಕವಾಗಿ ಅಪಾಯವನ್ನು ಮೈಮೇಲೆ ಎಳೆದುಕೊಳ್ಳುವುದು ಬೇಡ' ಅವರ ದನಿ ಕೊಂಚ ಏರಿತ್ತು.

'ಅವನು ಈ ಸ್ಥಿತಿಯಲ್ಲಿ ಬಹಳ ಹೊತ್ತಿನಿಂದ ಇದ್ದಾನೆ ಡಾಕ್ಟರ್. ಅವನ ಆತಂಕವೂ ಹೆಚ್ಚಾಗುತ್ತಿದೆ. ಅವನು ಇನ್ನೆಷ್ಟು ಹೊತ್ತು ಹೀಗೆಯೇ ನಿಶ್ಚಲನಾಗಿರಬಲ್ಲ?'

'ಪ್ಲೀಜ್, ಪ್ಲೀಜ್. ನಾವು ಅವಸರಿಸುವುದು ಬೇಡ.' ಅವರು ಬಲಗೈಯನ್ನು ಮೇಲೆತ್ತುತ್ತಾ ಹೇಳಿದರು. ಬೆವರನ್ನೊಸುತ್ತಾ ಅವರು ಯೋಚಿಸತೊಡಗಿದರು...

'ನನಗೊಂದು ಆಲೋಚನೆ ಹೊಳೆದಿದೆ. ಈ ಕೊಳಕು ಮಂಡಲದ ಜ್ಞಾನ ತಪ್ಪಿಸಿದರೆ ಹೇಗೆ?'

'ತುಂಬಾ ಒಳ್ಳೇ ಆಲೋಚನೆ ಡಾಕ್ಟರ್.'

'ಇದರಲ್ಲೂ ತುಂಬಾ ರಿಸ್ಕ್ ಇದೆ ಮಿಸ್ಟರ್ ಟಿಂಬರ್... ಹಾವುಗಳು ಶೀತರಕ್ತದ ಜೀವಿಗಳು. ಜ್ಞಾನ ತಪ್ಪಿಸುವ ರಾಸಾಯನಿಕಗಳು ಇವುಗಳ ಮೇಲೆ ಅಷ್ಟೊಂದು ಪ್ರಭಾವ ಬೀರುವುದಿಲ್ಲವಾದರೂ ಬೇರೆ ದಾರಿ ಕಾಣಿಸುತ್ತಿಲ್ಲ. ನಾವು ಒಂದೋ ಈಥರ್ ಅಥವಾ ಕ್ಲೋರೋಫಾರ್ಮ್ ಬಳಸಬಹುದು' ಯೋಚಿಸುತ್ತಾ ಹೇಳಿದರು ಡಾಕ್ಟರ್ ಗಾಂಧೇರ್ ಭಾಯಿ. ನಂತರ, 'ಯೋಚಿಸುತ್ತಾ ಕೂರಲು ಸಮಯವಿಲ್ಲ. ಕ್ಲೋರೋಫಾರಮ್ಮೇ ಸೂಕ್ತವೆಂದು ಕಾಣಿಸುತ್ತಿದೆ.' ಅವರು ನನ್ನ ಕೈಯನ್ನು ಹಿಡಿದು ವೆರಾಂಡಕ್ಕೆ ಬಂದರು. 'ಮಿಸ್ಟರ್ ಟಿಂಬರ್... ನೀವೀಗ ಆದಷ್ಟು ಬೇಗ ನನ್ನ ಮನೆಗೆ ಹೋಗಿ ಬನ್ನಿ. ಈ ಕೀಯನ್ನು ತೆಗೆದುಕೊಳ್ಳಿ. ಇದು ನನ್ನ ಔಷಧಿಗಳ ಕಪಾಟಿನದು. ನಾನು ಈಗಾಗಲೇ ನನ್ನ ಹುಡುಗನಿಗೆ ಫೋನ್ ಮಾಡಿ ತಿಳಿಸುತ್ತೇನೆ. ಅವನು ನಿಮಗೆ ತೋರಿಸುತ್ತಾನೆ. ಕಪಾಟಿನ ಮೇಲುಗಡೆ ಬಲಭಾಗದ ಅಂಚಿನಲ್ಲಿ ಕ್ಲೋರೋಫಾರಂ ಎಂದು ಬರೆದ ಬಾಟಲಿ ಕಾಣುತ್ತದೆ. ಅದನ್ನು ಆದಷ್ಟು ಬೇಗ ತಂದು ಬಿಡಿ.'

ನಾನು ತಕ್ಷಣ ಹೊರಟು ಹದಿನೈದು ನಿಮಿಷಗಳಲ್ಲಿ ಕ್ಲೋರೋಫಾರ್ಮ್ ಬಾಟಲಿಯನ್ನು ತಂದು ಅವರಿಗೆ ಒಪ್ಪಿಸಿದೆ.

'ಗುಡ್. ನಾವು ಕೆಲಸ ಶುರು ಮಾಡೋಣ. ಪಾಪ ಮಿಸ್ಟರ್ ಪೋಪರಿಗೂ ಹೆಚ್ಚು ಹೊತ್ತು ನಿಶ್ಚಲವಾಗಿ ಮಲಗಿರಲು ಸಾಧ್ಯವಿಲ್ಲ. ನಾನು ಅವರಿಗೆ ಎಲ್ಲಾ ವಿವರಿಸಿದ್ದೇನೆ.' ನಾನು ಅವರನ್ನು ಹಿಂಬಾಲಿಸಿ ಹ್ಯಾರಿಯ ಬೆಡ್‌ರೂಮಿಗೆ ಹೋದೆ. ಹ್ಯಾರಿ ಮೊದಲಿನಂತೆಯೇ ನಿಶ್ಚಲನಾಗಿ ಮಲಗಿದ್ದ. ಅವನ ಮುಖ ಬಿಳುಚಿಕೊಂಡಿತ್ತು ಮತ್ತು ಅವನು ಧಾರಾಳವಾಗಿ ಬೆವರು ಹರಿಸುತ್ತಿದ್ದ. ಅವನು ನನ್ನ ಕಡೆಗೆ ನೋಡಿದ. ನಾನು ಅವನಿಗೆ ಧೈರ್ಯ ತುಂಬುವವನಂತೆ ಮುಗುಳ್ನಕ್ಕೆ. ಡಾಕ್ಟರ್ ಗಾಂಧೇರ್ ಭಾಯಿ ಮಂಚದ ಕೆಳಗೆ ಕುಕ್ಕರುಗಾಲಿನಲ್ಲಿ ಕುಳಿತುಕೊಂಡರು. ಅವರ ಕೈಯಲ್ಲಿ ಅದೇ ರಬ್ಬರ್ ಟ್ಯೂಬಿತ್ತು. ಟ್ಯೂಬಿನ ಒಂದು ಕೊನೆಗೆ ಪೇಪರನ್ನು ಸುತ್ತಿ ಮಾಡಿದ್ದ ನಳಿಕೆಯನ್ನು ತೂರಿಸಲು ಪ್ರಯತ್ನಪಡುತ್ತಿದ್ದರು. ಇದಾದ ನಂತರ ಅವರು ಹ್ಯಾರಿಯ ಹೊಟ್ಟೆಯ ನೇರದಲ್ಲಿ ಹಾಸಿಗೆಯ ಒಳಗೆ ತೂರಿಸಿದ್ದ ಹೊದಿಕೆಯನ್ನು ಮೆಲ್ಲಗೆ ಬಿಡಿಸಿ ಟ್ಯೂಬು ಒಳಗೆ ತೂರಿಕೊಳ್ಳುವಷ್ಟು ಜಾಗ ಮಾಡಿಕೊಂಡರು. ಈ ಜಾಗದಲ್ಲಿ ಟ್ಯೂಬನ್ನು ತೂರಿಸತೊಡಗಿದರು. ಈ ಕೆಲಸಕ್ಕೆ ಅವರಿಗೆ ಎಷ್ಟು ಹೊತ್ತು ಹಿಡಿಯಿತೆಂದು ಅಂದಾಜಿಸಲು ನನಗೆ ಸಾಧ್ಯವೇ ಆಗಲಿಲ್ಲ. ಡಾಕ್ಟರ್ ಗಾಂಧೇರ್ ಭಾಯಿ ಕೂಡ ಹ್ಯಾರಿಯಂತೆಯೇ